# ಇನ್ಫೆಂಟ್ ಜೀಸಸ್ ಶಾಲೆ



ಕದ್ರಿಮಿದ್ರಿ, ಮೂಗ್ತಿಹಳ್ಳಿ, ಚಿಕ್ಕಮಗಳೂರು.

## ಶಾಲಾ ವಾರ್ಷಿಕ ವರದಿ : 09.02.2013

"ಭೂ ನಿವಾಸಿಗಳೇ, ಜಯಘೋಷ ಮಾಡಿ ಪ್ರಭುವಿಗೆ, ಅತೀ ಸಂತೋಷದಿಂದ ಸೇವೆ ಮಾಡಿ ಆತನಿಗೆ, ಹಾಡುತ, ಪಾಡುತ, ಬನ್ನಿ ಆತನ ಸನ್ನಿಧಿಗೆ" ಹರುಷದಿಂದ ದೇವರ ನಾಮಸ್ಮರಣೆ ಮಾಡಿ, ಬೈಬಲ್ ಶ್ರೀಗ್ರಂಥದ ಸ್ತುತಿಗೀತೆಯನ್ನು ಭಜಿಸುತ್ತಾ, ಪ್ರಕೃತಿಯ ಸಿರಿನಡುವಿನಲ್ಲಿರುವ ವಿದ್ಯಾಪರ್ವತ ನಮ್ಮ ಇನ್ಫೆಂಟ್ ಜೀಸಸ್ ಶಾಲೆಯ ಮಹತ್ಕಾರ್ಯಗಳನ್ನೆಸಗಿದ ದಯಾಮಯ ದೇವರಿಗೆ ಕೃತಜ್ಞನಾಗಿ ವಂದಿಸುತ್ತಾ, ಶಾಲಾ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿರುವ ಪೂಜ್ಯ ಗುರು ವಿನ್ಸೆಂಟ್ ಫುರ್ಟಾಡೊರವರೆ, ಮುಖ್ಯ ಅಥಿತಿಗಳಾದ ಶ್ರೀಮಾನ್ ಸಿ. ಟಿ. ರವಿಯವರೇ, ಗೌರವಾನ್ವಿತ ಅತಿಥಿಗಳಾದ ಶ್ರೀಮತಿ ಮಿನಿ ತೋಮಸ್‌ರವರೇ, ಶಾಲಾ ಪೋಷಕ–ರಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಶ್ರೀಧರ್‌ರವರೇ, ಗುರು ಹಿರಿಯರೇ, ಶಾಲಾ ಶಿಕ್ಷಕ–ಶಿಕ್ಷಕಿಯರೇ, ನನ್ನ ಪ್ರೀತಿಯ ಪುಟಾಣಿ ಮಕ್ಕಳೇ, ಹಾಗೂ ನೆರೆದಿರುವ ಸರ್ವ ಸಭಿಕರೇ, ನಮ್ಮ ಶಾಲಾ ವಾರ್ಷಿಕ ವರದಿಯನ್ನು ಮಂಡಿಸಲು ನಾನು ನಿಮ್ಮ ಮುಂದಿದ್ದೇನೆ.

ಮಲೆನಾಡ ಸೌಂದರ್ಯದ ರಮಣೀಯತೆಯಲ್ಲಿ ವಿದ್ಯಾಕಂಪನ್ನು ಬೀರಲು ಇಟಲಿ ದೇಶದ ಅಸ್ಸಿಸಿಯ ಸಂತ ಫ್ರಾನ್ಸಿಸ್ಸರ ಅನುಯಾಯಿಗಳಾದ ಕಪುಚಿನ್ ಸಹೋದರರಿಂದ ಮತ್ತು ಪ್ರಭುವಿನ ಇಚ್ಛೆಯಂತೆ ನಿಮ್ಮೆಲ್ಲರ ಒತ್ತಡದ ಮೇರೆಗೆ, 2005ರಲ್ಲಿ ಇನ್ಫೆಂಟ್ ಜೀಸಸ್ ಶಾಲೆಯನ್ನು ಪ್ರಾರಂಭಿಸಲಾಯಿತು. ಪುಟ್ಟ ಪುಟ್ಟ ಹೆಜ್ಜೆಯನ್ನಿಟ್ಟು ಹೊರಟ ನಮ್ಮ ಶಾಲೆ ಈಗ ಬೃಹತ್ ಆಗಿ ಬೆಳೆದು, ಚಿಕ್ಕಮಗಳೂರು ನಗರದಲ್ಲೇ ಹೆಸರುವಾಸಿಯಾಗಿದೆ. ಶಾಲೆಯು 3 ಮಹಡಿಯ ದೊಡ್ಡಕಟ್ಟಡವನ್ನು ಹೊಂದಿ ಆಕರ್ಷಣೀಯವಾಗಿದೆ. 2 ವಿಶಾಲ ಸಭಾಂಗಣ ಮತ್ತು ಸುಸಜ್ಜಿತ 28 ಕೊಠಡಿಗಳನ್ನು ಒಳಗೊಂಡಿದೆ. ಪ್ರಸ್ತುತ ನಮ್ಮ ಶಾಲೆಯು ಎಲ್.ಕೆ.ಜಿ. ಯಿಂದ ಆರನೇ ತರಗತಿಗೆ ತಲುಪಿ, 625 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಬೋಧಿಸಲು ನುರಿತ ಹಾಗೂ ಕ್ರಿಯಾಶೀಲಾ 29 ಸಿಬ್ಬಂದಿ ವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳ ಜ್ಞಾನಾಭಿವೃದ್ಧಿಗೆ ಯೋಗ್ಯವಾದ ಪುರಾತನ ಪದ್ಧತಿಯಿಂದ ಹಿಡಿದು, ಆಧುನಿಕ ಡಿಜಿಟಲ್ ಪದ್ಧತಿಯ ಎಲ್ಲಾ ರೀತಿಯ ಶಿಕ್ಷಣವನ್ನು ನೀಡಲಾಗುತ್ತಿದೆ. ಪಾಠಪ್ರವಚನದ ಜೊತೆ ಕ್ರೀಡೆ, ಯೋಗ, ನೃತ್ಯ, ಸಂಗೀತ, ನಾಟಕ, ಅಬಾಕಸ್, ಟೇಕ್ವಾಂಡೊ, ಸ್ಕೌಟ್ಸ್ ಮತ್ತು ಗೈಡ್ಸ್, ನೀತಿ ಬೋಧೆ, ಸ್ಪೋಕನ್ ಇಂಗ್ಲಿಷ್ ಕೋರ್ಸ್, ಬ್ಯಾಂಡ್ ಅಭ್ಯಾಸ ಮುಂತಾದ ಜೀವನಾಧರಿತ ಕಲೆಗಳನ್ನು ಕಲ್ಪಿಸಲಾಗುತ್ತಿದೆ. ಕಳೆದ ವರ್ಷ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಅದರಿಂದ ಮಕ್ಕಳ ಕಲಿಕೆಯಲ್ಲಿ ಪ್ರಗತಿ ಮತ್ತು ಆಸಕ್ತಿ ಹೆಚ್ಚಾಗಿದೆ. ಮಕ್ಕಳಿಗೆ ಸಾಮಾನ್ಯ ಪಾಠಗಳನ್ನು ಆಧುನಿಕ ಡಿಜಿಟಲ್ ಪದ್ಧತಿಯಲ್ಲಿ ಕಲಿಸಲಾಗುತ್ತಿದೆ. ಎಲ್.ಕೆ.ಜಿ. ಮಕ್ಕಳಿಂದ ಹಿಡಿದು ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಜ್ಞಾನ ನೀಡುವುದಕ್ಕೆ ಸುಸಜ್ಜಿತವಾದ ಕಂಪ್ಯೂಟರ್ ಲ್ಯಾಬ್ ಇದೆ. ವ್ಯವಸ್ಥಿತ ಗ್ರಂಥಾಲಯ, ಕ್ರೀಡೋಪಕರಣಗಳು ಮಕ್ಕಳನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡಿವೆ.

ಈ ವರ್ಷ ರಾಜ್ಯ ಮಟ್ಟದ ಪ್ರತಿಭಾ ಪರೀಕ್ಷೆಗಳನ್ನು ನಡೆಸಲಾಯಿತು. ಕನ್ನಡ, ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಕಥೆಹೇಳುವ ಪರೀಕ್ಷೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ, ತಾಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರ್‍ಯಾಂಕ್ ಪಡೆದು ಶಾಲೆಯ ಕೀರ್ತಿಯನ್ನು ಉತ್ತುಂಗಕ್ಕೇರಿಸಿದ್ದಾರೆ. ಪರಿಸರ ಪ್ರೇಮ, ಹೊರಾಂಗಣ ಆಟ, ನೋಡಿ ಕಲಿ, ಮಾಡಿ ತಿಳಿ, ಎಂಬ ಜ್ಞಾನವನ್ನು ನೀಡುವ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣವನ್ನು ಕಲ್ಪಿಸಿದ್ದು, ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಒಟ್ಟು 128 ವಿದ್ಯಾರ್ಥಿಗಳು ಇದ್ದಾರೆ. ಹೊಸದಾಗಿ ತರಬೇತಿ ಪಡೆದ ಶಿಕ್ಷಕರು ಸೇರಿ, ಒಟ್ಟು 8 ಜನ ಶಿಕ್ಷಕರು ತರಬೇತಿ ನೀಡುತ್ತಿದ್ದಾರೆ.

ನಗರದ ಜಿಲ್ಲಾ ಆಟದ ಮೈದಾನದಲ್ಲಿ 64ನೆ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ನಮ್ಮ ಶಾಲೆಯ 22 ಸ್ಕೌಟ್ಸ್ ವಿದ್ಯಾರ್ಥಿಗಳು ಭಾಗವಹಿಸಿ, ಅಧಿಕಾರಿಗಳ, ನಗರವಾಸಿಗಳ ಮನಮುಟ್ಟಿದ್ದಾರೆ. ಅದೇ ರೀತಿ ಬೆಂಗಳೂರಿನ ದೊಡ್ಡಬಳ್ಳಾಪುರದಲ್ಲಿ ನಡೆದ ಸ್ಕೌಟ್ಸ್ – ಗೈಡ್ಸ್ ಉತ್ಸವದಲ್ಲಿ ಶಾಲೆಯ ಕಬ್ಸ್ 6 ಮಂದಿ, ಸ್ಕೌಟ್ಸ್ 6 ಮಂದಿ, ಹಾಗೂ ಗೈಡ್ಸ್ 8 ಮಂದಿ ವಿದ್ಯಾರ್ಥಿಗಳು ಮತ್ತು 4 ಜನ ಶಿಕ್ಷಕರು ಭಾಗವಹಿಸಿ ಕೀರ್ತಿ ತಂದಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದ ವಲಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ, ಬಹುಮಾನ ಪಡೆದು ತಾಲೂಕು ಮಟ್ಟಕ್ಕೆ ಕೆಲವು ಆಟೋಟಗಳಲ್ಲಿ ನಮ್ಮ ಮಕ್ಕಳು ಆಯ್ಕೆಯಾಗಿದ್ದಾರೆ. ಅದೇ ರೀತಿ ಪ್ರತಿಭಾ ಕಾರಂಜಿಯಲ್ಲಿ ಉತ್ತಮ ಪ್ರದರ್ಶನ ನೀಡಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಸಹೋದರ ಸಂಬಂಧ, ಸ್ನೇಹತ್ವ ಮರೆಯಾಗುತ್ತಿರುವ ಈ ಕಾಲದಲ್ಲಿ ನಮ್ಮ ಶಾಲೆಯು ಸ್ನೇಹಪೂರ್ವಕ ಆಟಗಳಿಗೆ, ಪಕ್ಕದ ಆದಿಶಕ್ತಿನಗರದ ಸರ್ಕಾರಿಶಾಲೆ ಮತ್ತು ನಗರದ ಕೆಲವು ಶಾಲೆಗಳಿಗೆ ಆಮಂತ್ರಣ ನೀಡಿ ಸ್ನೇಹಮಯ ಕ್ರೀಡೆಗಳನ್ನು ನಡೆಸಿದೆ. ಇದರಿಂದ ಸ್ನೇಹತ್ವ ಗಟ್ಟಿಯಾಗಿ, ಮಕ್ಕಳ ಪ್ರತಿಭೆ ಮತ್ತು ಕಲಿಕೆ ವಿನಿಮಯವಾಗಿದೆ. ಹೊಸದಾಗಿ ಈ ವರ್ಷ 6 ಸಂಘಗಳನ್ನು ಪ್ರಾರಂಭಮಾಡಿದ್ದು, ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸ್ಕೌಟ್ಸ್ ಮತ್ತು ಗೈಡ್ಸ್, ಕ್ರೀಡಾ ಸಂಘಗಳು ಮಕ್ಕಳ ತಿಳುವಳಿಕೆಗೆ ಪೂರಕವಾದ ನಾಡುನುಡಿಗೆ ಬೇಕಾದ ಜೀವನಮೌಲ್ಯವನ್ನು ಕಲಿಸುವುದರ ಜೊತೆಗೆ ಮಕ್ಕಳಲ್ಲಿರುವ ಪರೀಕ್ಷಾ ಭಯವನ್ನು ಹೋಗಲಾಡಿಸಲು ಈ ಸಂಘಗಳು ಪ್ರತಿಭಾ ಪರೀಕ್ಷೆಗಳನ್ನು ನಡೆಸಿವೆ. ಸಾಹಿತ್ಯಿಕವಾಗಿ ಅಭಿವೃದ್ಧಿ ಹೊಂದಲು ಬೇಕಾದ ಕ್ರಿಯಾಚಟುವಟಿಕೆಗಳನ್ನು ಹಮ್ಮಿಕೊಂಡಿವೆ. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ, ಮಕ್ಕಳ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವ, ಗಣರಾಜ್ಯೋತ್ಸವ, ಶಿಕ್ಷಕರ ದಿನಾಚರಣೆ, ದೀಪಾವಳಿ, ರಮ್ಜಾನ್, ಕ್ರಿಸ್ಮಸ್ ಹಬ್ಬ ಹಾಗೂ ಇನ್ನಿತರ ಹತ್ತು ಹಲವಾರು ಹಬ್ಬಗಳನ್ನು ಶಾಲೆಯಲ್ಲಿ ಆಚರಿಸಿ ಅದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ.

ಪೋಷಕ–ರಕ್ಷಕ ಸಂಘದ ಚುನಾವಣೆಯನ್ನು ಜುಲೈ ತಿಂಗಳಲ್ಲಿ ನಡೆಸಿ, ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಈ ಸಮಿತಿಯಲ್ಲಿ 7 ಸದಸ್ಯರಿದ್ದು, ಈ ವರ್ಷದಲ್ಲಿ 8 ಸಾರಿ ಸಭೆ ಸೇರಿ, ಶಾಲಾ ಅಭಿವೃದ್ಧಿಗೋಸ್ಕರ ಶ್ರಮಿಸಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ, ಸರ್ವ ಹಬ್ಬ ಸಮಾರಂಭಗಳಲ್ಲಿ ಮಕ್ಕಳಿಗೆ ಹಾಗೂ ಸರ್ವರಿಗೆ ಸಿಹಿ ತಿಂಡಿಯನ್ನು ನೀಡಿದ್ದಾರೆ. ಅಷ್ಟು ಮಾತ್ರವಲ್ಲ, ಶಾಲಾ ನೂತನ ಸಭಾಂಗಣಕ್ಕೆ ಕುಳಿತುಕೊಳ್ಳುವ ವ್ಯವಸ್ಥೆಗಾಗಿ ಎಲ್ಲಾ ಪೋಷಕ ಹಾಗೂ ಹಿತೈಷಿಗಳಿಂದ ಹಣ ಸಂಗ್ರಹಿಸಿ 1000 ಖುರ್ಚಿಗಳನ್ನು ನೀಡುವ ಯೋಜನೆಯಲ್ಲಿ ತೊಡಗಿದ್ದಾರೆ. ಪ್ರಸ್ತುತ ವರ್ಷದ ಈ ಪೋಷಕ–ರಕ್ಷಕ ಸಂಘವು ಅತ್ಯುತ್ತಮ ಕ್ರಿಯಾಶೀಲ ಸಂಘವೆಂದು ಹೇಳಲು ಹೆಮ್ಮೆ ಪಡುತ್ತೇನೆ. ಸಂಘದ ಸರ್ವ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುವಾಗ, ಅವರು ಕೈ ಹಿಡದ ಈ ಯೋಜನೆಯು ಶೀಘ್ರದಲ್ಲೇ ಕಾರ್ಯಗತವಾಗಲೆಂದು ನನ್ನ ಪ್ರಾರ್ಥನೆ.

ಕಲ್ಲಾಗಲೀ, ಮಣ್ಣಾಗಲೀ, ಮರವಾಗಲೀ, ಅವುಗಳಿಗೆ ಯೋಗ್ಯವಾದ ಕೆತ್ತನೆಯನ್ನು ನೀಡಿದರೆ ಸುಂದರ ಆಕೃತಿಗಳಾಗುತ್ತವೆ. ಅಂತೆಯೇ ಶಾಲೆಯು ಮಕ್ಕಳನ್ನು ದೇಶಕ್ಕೆ ಬೇಕಾದ ಉಪಯುಕ್ತ ನಾಗರೀಕರನ್ನಾಗಿ ಬೆಳೆಸುತ್ತಿದೆ. ಇನ್ನೂ ಮಹತ್ತರ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಮುಂದಿನ ದಿನಗಳಲ್ಲಿ ಅವುಗಳನ್ನು ಪೂರ್ಣಗೊಳಿಸಲಾಗುತ್ತದೆ. ಇಷ್ಟೆಲ್ಲಾ ಯೋಜನೆಗಳನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾದದ್ದು ದೇವರ ಆಶೀರ್ವಾದದಿಂದ ಮತ್ತು ನಿಮ್ಮೆಲ್ಲರ ಪ್ರೀತಿ ವಿಶ್ವಾಸದಿಂದ. ಎಲ್ಲಾ ಶೈಕ್ಷಣಿಕ ಚಟುವಟಿಕೆಗಳು ಸರಿಯಾದ ಸಮಯಕ್ಕೆ ಸರಿಯಾದ ರೀತಿಯಲ್ಲಿ ನಡೆಸಲು ಸಹಾಯ ಮಾಡಿದ ಗುರುಹಿರಿಯರಿಗೂ, ಶಾಲಾ ಸಿಬ್ಬಂದಿ ವರ್ಗದವರಿಗೂ, ಹಿತೈಷಿಗಳಿಗೂ, ಪೋಷಕರಿಗೂ ಮತ್ತು ಮಕ್ಕಳಿಗೂ ನಾನು ಸದಾ ಚಿರಋಣಿ. ಶಾಲಾ ಪಾಲಕರಾದ ಬಾಲ ಯೇಸುವಿನ ಕೃಪೆ ಹಾಗೂ ದಯೆಯು ನೆರೆದಿರುವ ನಿಮ್ಮೆಲ್ಲರೊಡನೆ ಸದಾ ಮನೆಮಾಡಲೆಂದು ಪ್ರಾರ್ಥಿಸುತ್ತಾ ಈ ವರದಿಯನ್ನು ಮುಕ್ತಾಯಗೊಳಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ, ಜೈ ಇನ್ಫೆಂಟ್ ಜೀಸಸ್ ಶಾಲೆ.

ಬ್ರ. ವಿಕ್ಟರ್ ಕ್ರಾಸ್ತಾ, ಕಪುಚಿನ್
ಮುಖ್ಯೋಪಾಧ್ಯಾಯರು.....